ಆ), ಇ) ಮತ್ತು ಈ) ಮಂಡೂರಿನಲ್ಲಿ ನಿರ್ಮಾಣ ಮಾಡಲಾಗುತ್ತಿರುವ 66/11 ಕೆ.ವಿ. ವಿದ್ಯುತ್ ಉಪ ಕೇಂದ್ರದ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿದ್ದು, ಸದರಿ ಉಪ ಕೇಂದ್ರವನ್ನು ಚಾಲನೆಗೊಳಿಸು ಹೊಸಕೋಟೆಯಿಂದ 66 ಕೆ.ವಿ. ಪ್ರಸರಣ ಮಾರ್ಗದ ನಿರ್ಮಾಣ ಕಾಮಗಾರಿಯು ಸ್ಥಳೀಯರ ಅಡಚಣೆಯಿಂದಾಗಿ (RoW problem) ಸ್ಥಗಿತಗೊಂಡಿರುತ್ತದೆ. ಅಡಚಣೆಯನ್ನು ತೆರವುಗೊಳಿಸಲು ಪ್ರಯತ್ನ ನಡೆಸಲಾಗುತ್ತಿದೆ.

66/11 ಕೆ.ವಿ. ಕೋನದಾಸಪುರ (ಸಫಲ್ ಮಾರ್ಕೆಟ್) ವಿದ್ಯುತ್ ಉಪ ಕೇಂದ್ರವನ್ನು ದಿನಾಂಕ 29.06.2014 ರಂದು ಚಾಲನೆಗೊಳಿಸಲಾಗಿರುತ್ತದೆ.

66/11 ಕೆ.ವಿ. ಕಾಡುಗೋಡಿ ವಿದ್ಯುತ್ ಉಪ ಕೇಂದ್ರದಿಂದ 1.37 ಕಿ.ಮೀ. ಉದ್ದದ 66 ಕೆ.ವಿ. ಭೂಗತ ಕೇಬಲ್ ಅಳವಡಿಸಲು ಟೆಂಡರ್ ಕರೆಯಲಾಗಿದ್ದು, ಈ ಕಾಮಗಾರಿಯು ಪೂರ್ಣಗೊಂಡ ನಂತರ 66/11 ಕೆ.ವಿ. ಕೋನದಾಸಪುರ (ಸಫಲ್ ಮಾರ್ಕೆಟ್) ವಿದ್ಯುತ್ ಉಪ ಕೇಂದ್ರದಿಂದ ಅಗತ್ಯ ಪ್ರಮಾಣದ ವಿದ್ಯುತ್ ಸರಬರಾಜು ಮಾಡಲಾಗುವುದು.

ಲೋಕೋಪಯೋಗಿ ಇಲಾಖೆಗೆ ಒಳಪಡುವ ರಸ್ತೆಗಳ ದುರಸ್ತಿ

1779 (2134); ಶ್ರೀ ಅರವಿಂದ ಲಿಂಬಾವಳಿ (ಮಹದೇವಪುರ)

ಅ) ರಾಜ್ಯದ ಲೋಕೋಪಯೋಗಿ ಇಲಾಖೆಗೆ ಒಳಪಡುವ ರಸ್ತೆಗಳು ಎಷ್ಟು ಹಾಗೂ ಅವುಗಳ ಉದ್ದ ಎಷ್ಟು; (ವಿವಿಧ ಕ್ಯಾಟಗರಿಗಳ ವಿವರ ಒದಗಿಸುವುದು)

ಆ) ಈ ರಸ್ತೆಗಳು ಹಾಳಾದಾಗ ದುರಸ್ತಿ ಮಾಡುವ ವ್ಯವಸ್ಥೆ ಏನು;

ಇ) ಹಾಳಾದ ಎಷ್ಟು ದಿನಗಳ ನಂತರ ದುರಸ್ತಿಗೊಳಿಸುವ ವ್ಯವಸ್ಥೆ ಸರ್ಕಾರದಲ್ಲಿ ಇದೆ;

ಈ) ನಗರ ಹಾಗೂ ಗ್ರಾಮೀಣ ವಸತಿ ಪ್ರದೇಶಗಳ ಮೂಲಕ ಹಾದು ಹೋಗುವ ಈ ರಸ್ತೆಗಳಲ್ಲಿ ಪಾದಚಾರಿ ಮಾರ್ಗ, ಬೀದಿ ದೀಪಗಳನ್ನು ಅಳವಡಿಸುವ ಯೋಜನೆ ಇದೆಯೇ?

ಡಾ: ಹೆಚ್.ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು)

ಅ) ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ಸಂಖ್ಯೆ ಹಾಗೂ ಅವುಗಳ ಉದ್ದದ ವಿವರ ಈ ಕೆಳಕಂಡಂತಿವೆ:

ಕ್ರ. ಸಂ.	ರಸ್ತೆಯ ವಿಧ	ಸಂಖ್ಯೆ	ಉದ್ದ (ಕಿ.ಮೀ.)
1.	ರಾಷ್ಟ್ರೀಯ ಹೆದ್ದಾರಿ	24	6,326.00
2.	ರಾಜ್ಯ ಹೆದ್ದಾರಿ	171	18,920.00
3.	ಜಿಲ್ಲಾ ಮುಖ್ಯ ರಸ್ತೆಗಳು	5079	49,648.96

ಆ) Road Information System (RIS) ಮತ್ತು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯದ ಮಾನದಂಡದನುಸಾರ ಹಿಂದಿನ ವರ್ಷಗಳಲ್ಲಿ ಆಯಾ ರಸ್ತೆಗಳಲ್ಲಿ ಕೈಗೊಳ್ಳಲಾದ ಕಾಮಗಾರಿಗಳನ್ನು ಗಣನೆಗೆ ತೆಗೆದುಕೊಂಡು ಅರ್ಹ ರಸ್ತೆಗಳ ದುರಸ್ತಿಯನ್ನು ಹಾಗೂ ನಿರ್ವಹಣೆಯನ್ನು ಪ್ರತಿ ವರ್ಷ ಕೈಗೊಂಡು ವಾಹನಗಳ ಸುಗಮ ಸಂಚಾರಕ್ಕೆ ಅನುವುಗೊಳಿಸಲಾಗುತ್ತಿದೆ.

ಇ) ಹಾಳಾದ ರಸ್ತೆ ಮೇಲ್ಪೈ ದುರಸ್ತಿಯನ್ನು ಸುಮಾರು 3 ತಿಂಗಳೊಳಗೆ ಕೈಗೊಳ್ಳಲಾಗುವುದು. ಪ್ರಧಾನ ದುರಸ್ತಿ ಕಾಮಗಾರಿಯನ್ನು ಪೂರ್ಣ ಪ್ರಮಾಣದಲ್ಲಿ ಕೈಗೊಳ್ಳಲು ಸುಮಾರು 6–9 ತಿಂಗಳುಗಳ ಅವಶ್ಯವಿರುತ್ತದೆ.

ಈ) ಈ ರೀತಿಯ ಯಾವುದೇ ಯೋಜನೆ ಲೋಕೋಪಯೋಗಿ ಇಲಾಖೆಯಡಿ ಪ್ರಸ್ತಾವ ಇರುವುದಿಲ್ಲ.